ಸಿ.ಸಿ. ನಂ-496/2015

Cw-1 Pw-2

<u>ದಿನಾಂಕಃ 16-12-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

ಪಾಟೀ ಸವಾಲುಃ ಶ್ರೀ ಎಸ್ ಬಿ ಎಚ್ 1 ಮತ್ತು 2 ನೇ ಆರೋಪಿ ಪರ ವಕೀಲರಿಂದಃ-

ನನ್ನ ಸ್ವಂತ ಊರು ಸಾವಳಗಿ .ಅಲ್ಲಿ ನಾನು ಒಕ್ಕಲುತನ ಮಾಡುತ್ತೇನೆ . ನಾನು ತೋಟದ ಮನೆಯಲ್ಲಿ ವಾಸವಾಗಿರುತ್ತೇನೆ . ಸಾವಳಗಿಯಲ್ಲಿ ಸಂತೆ ಶನಿವಾರ ಆಗುತ್ತದೆ . ನಮ್ಮ ಜಮೀನಿಂದ ಸಾವಳಗಿಗೆ ಸುಮಾರು 03 ಕೀ ಮೀ ಅಗುತ್ತದೆ . ಸಂತೆಯನ್ನು ನಾನು ಸಾವಳಗಿಯಲ್ಲಿ ಮಾತ್ರ ಮಾಡುತ್ತೇನೆ ಎಂದರೆ ಸಾಕ್ಷಿ ಸಾವಳಗಿ ಯಲ್ಲಿ ಮತ್ತು ತೋದಲಬಾಗಿಯಲ್ಲಿ ಮಾಡುತ್ತೇನೆ . ತೋದಲಬಾಗಿ ಯಲ್ಲಿ ಸಂತೆ ಸೋಮವಾರ ಅಗುತ್ತದೆ . ಪಿರ್ಯಾದಿಯಲ್ಲಿ ಏನು ಬರೆಸಿದ ಬಗ್ಗೆ ನನಗೆ ನಿಕರವಾಗಿ ಹೇಳಲು ಬರುವದಿಲ್ಲ ಪಿರ್ಯಾದಿಯನ್ನು ಪೋಲಿಸರು ಬರೆಸಿರುತ್ತಾರೆ . ಪೋಲಿಸರು ಪಿರ್ಯಾದಿ ಬರೆದ ನನಗೆ ಓದಿ ತಿಳಿಸಿರುತ್ತಾರೆ . ಅಪಘಾತ ಸೊಮವಾರ ಆಗಿರುತ್ತದೆ ಆ ದಿನ ಸಂತೆ ಇತ್ತು . ಆ ಕಾಲಕ್ಕೆ ರೋಡ ಕಾಮಕಾರಿ ಕೆಲಸ ನಡೆದಿತ್ತು ಎಂದರೆ ನಾನು ನೋಡಿರುವದಿಲ್ಲ . ಎಷ್ಟು ದಿನಗಳಿಂದ ರಸ್ತೆ ಕಾಮಕಾರಿ ಕೆಲಸ ನಡೆಯುತ್ತಿದ್ದ ಬಗ್ಗೆ ನನಗೆ ಗೊತ್ತಿರುವದಿಲ್ಲ .

ಚಿಕ್ಕಲಕಿ - ಸಾವಳಗಿ ರಸ್ತೆಯ ಮೇಲೆ ಆ ಕಾಲಕ್ಕೆ ಡಾಂಬರಿಕರಣ ಕೆಲಸ ನಡೆದಿದ್ದು ಎಂದರೆ ಸರಿ . ಚಿಕ್ಕಲಕಿ ಕ್ರಾಸದಿಂದ ಸಾವಳಗಿಗೆ , ನಾಗನೂರ ಕ್ಕೆ ಹೊಗಲು ಇದೆ ಒಂದು ದಾರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ನಾನು ಖಾಯಂ ಸಂತೆಗೆ ಬಂದು ಹೋಗಿ ಮಾಡುತ್ತಿದ್ದ ಕಾರಣ ಸದರಿ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಆ ಕಾಲಕ್ಕೆ ರಸ್ತೆ ಕಾಮಕಾರಿ ಕೆಲಸ ನಡೆದಿದ್ದ ಕಾರಣ ದ್ವಿಚಕ್ರ ವಾಹನ ಮತ್ತು ಟ್ರಾಕ್ಟರ, ಕಾರ ಹೋಗಲು ರಸ್ತೆಯ ಮೇಲೆ ದಾರಿ ಇರಲ್ಲಿಲ್ಲ ಎಂದರೆ ಸರಿಯಲ್ಲ . ಆದೇ ದಾರಿ ಮೇಲೆ ಸಾವಳಗಿಗೆ ಬಸ್ಸ ಹೋಗುತ್ತದೆ ಎಂದರೆ ಸರಿ . ಆ ದಿನ ಸಂತೆ ಇದ್ದ ಕಾರಣ ಮತ್ತು ರಸ್ತೆ ಕಾಮಕಾರಿ ಕೆಲಸ ನಡೆದಿದ್ದ ಕಾರಣ ಅಪಘಾತ ವಾಗಿರುತ್ತದೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಟ್ರಾಕ್ಟರ ಲೋಡ ಇದ್ದಾಗ ಎಷ್ಟು ವೇಗವಾಗಿ ಹೋಗುತ್ತಿದ್ದ ಬಗ್ಗೆ ನನಗೆ ನಿಕರವಾಗಿ ಹೇಳುಲು ಬರುವದಿಲ್ಲ . ಆಪಘಾತವಾದಾಗ ನಾನು ತರಕಾರಿ ಸಂತೆ ಮಾಡುತ್ತಿದ್ದೆ . ಆ ದಿನ ರಸ್ತೆ ಕಾಮಕಾರಿ ನಡೆದಿದ್ದ ಕಾರಣ ಯಾವುದೇ ಟ್ರಾಕ್ಟರ ಬಸ್ಸ ದ್ವಿಚಕ್ರ ವಾಹನ ಅತಿ ವೇಗದಿಂದ ಹೋಗಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ . ರಸ್ತೆಯ ಬಲಕ್ಕೆ ಮಾತ್ರ ಸಂತೆ ಮಾಡುತ್ತಾರೆ . ನನಗೆ ಅಪಘಾತದಲ್ಲಿ ಬುಜಕ್ಕೆ ಪೆಟ್ಟಾಗಿದ್ದು ಎಂದು ಸುಳುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ .

ಆರೋಪಿಗಳ ಪೈಕಿ ಅವರ ಹೆಸರುಗಳನ್ನು ನನಗೆ ಹೇಳಲು ಬರುವದಿಲ್ಲ . ಪಿರ್ಯಾದಿಯಲ್ಲಿ ಯಾರು ಗಾಯಳುಗಳು ಅಗಿದ್ದು ಹೇಳಿ ಬರೆಸಿದ ಬಗ್ಗೆ ಈಗ ನನಗೆ ಹೇಳಲು ಬರುವದಿಲ್ಲ . ಅಪಘಾತದಲ್ಲಿ ಯಾರು ಯಾರು ಮರಣ ಹೊಂದಿದ ಬಗ್ಗೆ ಅವರ ಹೆಸರುಗಳ ಸಹ ನನಗೆ ಹೇಳಲು ಬರುವದಿಲ್ಲ . ಯಾವ ಕಂಪನಿಯ ಟ್ರಾಕ್ಟರ ದಿಂದ ಅಪಘಾತವಾದ ಬಗ್ಗೆ ನನಗೆ ಹೇಳಲು ಬರುವದಿಲ್ಲ . ನಾನು ಆ ದಿನ ಸಂತೆಗೆ ಬಂದಾಗ ಬೆಳಿಗ್ಗೆ 11-00 ಗಂಟೆ ಆಗಿತ್ತು . ಅಪಘಾತವೂ ಮದ್ಯಾಹ್ನ 02-00 ಗಂಟೆಗೆ ಆಗಿರುತ್ತದೆ . ನನಗೆ ಅಪಘಾತದ ವಯಕ್ತಿಕವಾಗಿ ಮಾಹಿತಿ ಇಲ್ಲದೇ ಇದ್ದರೂ ಸಹ ಅಪಘಾತ ದಲ್ಲಿ ನನಗೆ ಯಾವುದೇ ಗಾಯ ಆಗಿರುವದಿಲ್ಲ ಆದರೂ ಸಹ ಪೋಲಿಸರ ಒತ್ತಾಯ ಮೇರೆಗೆ ಪಿರ್ಯಾದಿ ಕೊಟ್ಟು ಈ ದಿನ ಖೊಟ್ಟಿ ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಅಪಘಾತದಲ್ಲಿ ಯಾರಿಗೆ ಏನು ಅದ ಬಗ್ಗೆ ವಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . ಅದರೂ ಸಹ ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

ಮರು ವಿಚಾರಣೆ ಃ- ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಹಾಗೂ ಜೆಎಮ್ ಎಫ್ ಸಿ ಜಮಖಂಡಿ.